ರಾಯಚೂರು ಜಿಲ್ಲೆಯಲ್ಲಿರುವ ಮಿತವೇತನ ಪದವೀಧರರು

1290 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಯಚೂರು ಜಿಲ್ಲೆಯಲ್ಲಿರುವ ಸ್ಟೈಫಂಡರಿ ಪದವೀಧರ ನೌಕರರ ಸಂಖ್ಯೆ ಎಷ್ಟು?*

ಆ) *ರಾಯಚೂರು ಜಿಲ್ಲೆಯಲ್ಲಿರುವ ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?*

ಇ) *ಹಾಗಿದ್ದಲ್ಲಿ 1989ರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಖಾಯಂಗೊಳಿಸಲಾಗಿದೆ?*

ಈ) *ಇಲ್ಲದಿದ್ದರೆ ಯಾವಾಗ ಖಾಯಂಗೊಳಿಸಲಾಗುವುದು?*

ಶ್ರೀ ಸಿ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

ಅ) 250

ಆ) ಹೌದು

ಇ) 1303

ಈ) ಖಾಯಂಗೊಳಿಸುವ ಸಲುವಾಗಿ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಖಾಲಿ ಹುದ್ದೆಗಳನ್ನು ಕಳುಹಿಸಲು ಕೋರಲಾಗಿದೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯಲ್ಲಿ ಸ್ಟೈಫಂಡರಿ ಪದವೀಧರರ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ, ಉತ್ತರದಲ್ಲಿ 1303 ಸ್ಟೈಫಂಡರಿ ಪದವೀಧರರು ಇದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಇವರನ್ನು ಬೇಗ ಖಾಯಂಗೊಳಿಸಬೇಕೆಂದು ಹಲವಾರು ಸಲ ಸದಸ್ಯರು ಕೇಳಿದ್ದಾರೆ. ಇನ್ನು ಎಷ್ಟು ದಿವಸಗಳಲ್ಲಿ ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುತ್ತೀರೆಂಬುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಯುವಕರಿದ್ದಾರೆ, ಆದಷ್ಟು ತೀವ್ರಗತಿಯಲ್ಲಿ ಯುವಕರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಎಲ್ಲಾ ಇಲಾಖೆಗಳಿಗೆ ಮಾಹಿತಿಯನ್ನು ಕೇಳಿದ್ದೇವೆ. ಅವರು ಎಲ್ಲಾ ಮಾಹಿತಿಯನ್ನು ನಮಗೆ ಕಳುಹಿಸಿಕೊಡುವುದಕ್ಕೆ ನಾಳೆಯೇ ಕೊನೆಯ ದಿನಾಂಕವಾಗಿದೆ. ಅವರು ಕಳುಹಿಸಿಕೊಟ್ಟ ಮೇಲೆ ಖಾಲಿ ಇರುವ ಸ್ಥಳಗಳಿಗೆ ಶೀಘ್ರದಲ್ಲಿಯೇ ಅವರನ್ನು ಭರ್ತಿ ಮಾಡಲಾಗುವುದೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆಗಳ ನಾಶ

1235 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಅತೀ ವೃಷ್ಟಿಯಿಂದ ಖಾರೀಫ್ ಬೆಳೆಗಳು ಹಾಗೂ ರಾಬಿ ಬೆಳೆಗಳು ನಾಶವಾಗಿ ಅದರಲ್ಲಿ ಮುಖ್ಯ ಬೆಳೆಯಾದ ತೊಗರೀ ಬೆಳೆ ಒಣಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆದಾಗ್ಯೂ ಉಳಿದ ಬೆಳೆಗಳಿಗಾಗಿ ಕ್ರಿಮಿನಾಶಕ, ಇತ್ಯಾದಿ ಔಷಧಿಗಳನ್ನು ಸಿಂಪಡಿಸಿದರೆ ಅವುಗಳು ಪೂರ್ತಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):